ಉಟ್ಟುಕೊಂಡು ಸಮುದ್ರದಲ್ಲಿ ಮುಳುಗಿ ಸ್ನಾನ ಮಾಡಿ ಬನ್ನಿ' ಎಂದರು.

ಅವನು ಪ್ಯಾಂಟು ಶರ್ಟು ಕಳಚಿ ಬೈರಾಸು ಉಟ್ಟುಕೊಂಡು ಬರುವಷ್ಟರಲ್ಲಿ ಅವರ ಸಹಾಯಕ ಪಿಂಡ ಹಾಕಲು ಬೇಕಾದ ಪರಿಕರಗಳನ್ನೆಲ್ಲ ಚೀಲದಿಂದ ಹೊರಗೆ ತೆಗೆದು ಹರಡಿಸಿ ಜೋಡಿಸಿ ವ್ಯವಸ್ಥೆ ಮಾಡಿದ್ದ.

ಪರಮಧಾಮಿ ಸ್ವಾಮಿಗಳು, 'ಇಲ್ಲಿ ಬ್ರಹ್ಮನು ವಾಸವಾಗಿದ್ದಾನೆ. ಅವನ ಪ್ರತೀಕ ಇದು' ಎಂದು ಚೀಲದಿಂದ ಒಂದು ಕರಿಯ ಶಿಲೆಯನ್ನು ತೆಗೆದು ಒಂದು ಹರಿವಾಣದ ಮೇಲೆ ಇಟ್ಟರು. ಅದಕ್ಕೆ ತರ್ಪಣ ಬಿಡುವುದು ಅಲ್ಲಿನ ಸಂಪ್ರದಾಯ ಎಂದು ಹೇಳಿದರು. ಶೃಂಗರಾಜ ತಲೆಯಾಡಿಸಿದ.

ಪರಮಧಾಮಿ ಸ್ವಾಮಿಗಳು ಮತ್ತೆ ಹೇಳಿದರು, 'ಮೋಕ್ಷ ನಾಲ್ಕು ತೆರನಾಗಿದೆ. ಪೆಣ್‌ಬುಯಿಲ್ ಕಾಳಗದಲ್ಲಿ ಸತ್ತಾಗ, ತುರುಗೋಳ್ ಕಾಳಗದಲ್ಲಿ ಮಡಿದಾಗ, ಕಾಶೀಯಾತ್ರೆಯಿಂದ, ಭೂಕರ್ಣದಲ್ಲಿ ಪಿಂಡ ಹಾಕಿದರೆ... ಹೀಗೆ ನಾಲ್ಕು ವಿಧ. ಈ ಕ್ಷೇತ್ರದಲ್ಲಿ ಪಿಂಡ ಹಾಕುವಾಗ ಮುಂಡನ ಮಾಡಬೇಕೆಂದೂ ಇಲ್ಲ.'

ಶೃಂಗರಾಜ ತನ್ನ ಸೊಂಪಾದ ಕೂದಲನ್ನು ಸವರಿಕೊಂಡು ಯೋಚಿಸಿದ: 'ತಲೆಯನ್ನು ನುಣ್ಣಗೆ ಬೋಳು ಮಾಡಿಸುವುದು ಇದರ ಭಾಗವಾಗಿತ್ತೆಂದು ಮೊದಲು ಕಲ್ಪಿಸಿಕೊಂಡೇ ಇರಲಿಲ್ಲ ನಾನು! ಹಾಗೇನಾದರೂ ಒತ್ತಾಯ ಮಾಡಿಸಿದ್ದರೆ ನಾನು ಅದನ್ನು ಮಾಡಲು ಒಪ್ಪುತ್ತಿರಲಿಲ್ಲ. ಮಾಡಬೇಕಾಗಿಲ್ಲ ಎಂದು ಪುರೋಹಿತರೇ ಹೇಳುತ್ತಿರುವುದರಿಂದ ಚಿಕ್ಕಮ್ಮ ಕೇಳಿದರೆ ಉತ್ತರಿಸಲು ಸರಿಯಾದ ಕಾರಣ ಸಿಕ್ಕಿತಲ್ಲ!'

ಪರಮಧಾಮಿ ಸ್ವಾಮಿಗಳು ಹೇಳಿದರು: 'ಇಲ್ಲಿ ಪಿಂಡ ಹಾಕಬೇಕಾದರೆ ನೆಲದ ಮೇಲೆ ಮಲಗಬೇಕು. ನೀವು ನಿನ್ನೆ ರಾತ್ರಿ ಎಲ್ಲಿ ಮಲಗಿದ್ದು?'

'ಮಂಚದ ಮೇಲೆ.'

'ಹಾಗಾದರೆ ಆ ದೋಣಿ ಮನೆಯಲ್ಲಿ ಸ್ವಲ್ಪ ಹೊತ್ತು ನೆಲದ ಮೇಲೆ ಮಲಗಿ ಬನ್ನಿ.'

ಶೃಂಗರಾಜನು ಹಾಗೆ ಸಿದ್ಧನಾಗಿ ಬಂದು ಸಮುದ್ರದ ದಡದಲ್ಲಿ ಮಾಡಬೇಕಾದ ಕ್ರಿಯೆಗಳನ್ನೆಲ್ಲ ಪರಮಧಾಮಿ ಸ್ವಾಮಿಗಳು ಹೇಳಿದಂತೆ ಆಚರಿಸಿದನು. ಆಮೇಲೆ ಮುಂದಿನ ಹಂತದ ಅಪರಕ್ರಿಯೆ. ನಿಜವಾಗಿ ಅದು ಭೂಕರ್ಣದ ಮೂರು ದಿನಗಳ ಅಪರಕ್ರಿಯೆಗಳಲ್ಲಿ ಮೂರನೆಯ ದಿನ ಮಾಡುವ ಕೊನೆಯ ಕ್ರಿಯೆ. ಕೊರೊನಾದ ಕಾರಣ ಈಗ ಒಂದೇ ದಿನದಲ್ಲಿ ಮುಗಿಸುತ್ತೇವೆಂದು ಪರಮಧಾಮಿ ಸ್ವಾಮಿಗಳು ಹೇಳಿದರು.



ಪರಮಧಾಮಿ ಸ್ವಾಮಿಗಳು ಅದರ ಮಹತ್ವವನ್ನು ಹೀಗೆ ವರ್ಣಿಸಿದರು: ''ಭೂಕರ್ಣದಲ್ಲಿ ಇಲ್ಲಿಂದ ಸ್ವಲ್ಪ ದೂರದಲ್ಲಿ ಬೆಟ್ಟದ ಆಚೆಬದಿಯಲ್ಲಿ, ಸಮುದ್ರವನ್ನು ನೋಡಿಕೊಂಡು ಕರಣಶೀರ್ಷ ಎಂಬ ದೊಡ್ಡ ಬಂಡೆಗಲ್ಲು ಇದೆ. ಜನರೆಲ್ಲ ಅದನ್ನು ಪ್ರೇತಶಿಲೆ ಎಂದು ಹೇಳುತ್ತಾರೆ. ಅದೊಂದು ಪವಿತ್ರ ತೀರ್ಥಸ್ಥಳವಾಗಿದೆ; ಅಲ್ಲಿ ನಡೆಸುವ ಕ್ರಿಯಾವಿಧಿಗಳಿಂದ ಭೂಕರ್ಣ ಯಾತ್ರೆ ಸಂಪೂರ್ಣವಾಗುತ್ತದೆ. ನಿಜವಾಗಿ ಅದು ಕರಣಾಸುರ ಎಂಬ ದೈತ್ಯನ ತಲೆ. ಒಮ್ಮೆ ಆ ದಾನವನ ಮೈಮೇಲೆ ದೇವಾನುದೇವತೆಗಳು ಒಂದು ಯಜ್ಞವನ್ನು ಮಾಡಿದರಂತೆ. ಆಗ ಯಜ್ಞದ ಬೆಂಕಿಯ ಬಿಸಿಯನ್ನು ಸಹಿಸಲಾಗದೆ ದಾನವ ಮಿಸುಕಾಡಿದನಂತೆ. ಆಗ ಇನ್ನೂ ಬಲಶಾಲಿಗಳಾದ ದೇವತೆಗಳೆಲ್ಲ ಅವನ ತಲೆಯ ಮೇಲೆ ಕುಳಿತು ಅವನನ್ನು ಒತ್ತಿಟ್ಟರಂತೆ. ಯಜ್ಞ ಮುಗಿದಮೇಲೆ ಅವನು ಶ್ರೀಹರಿಯಲ್ಲಿ, 'ನಿನ್ನ ಮಾತು ಕೇಳಿ ನಾನು ಯಜ್ಞ ಮಾಡಲು ನನ್ನ ದೇಹವನ್ನು ಕೊಟ್ಟರೆ, ದೇವತೆಗಳು ನನಗೆ ಹೀಗೆ ಕಿರುಕುಳ ನೀಡಿದರಲ್ಲ?' ಎಂದು ದೂರು ನೀಡಿದಾಗ ಅವನು, 'ನೀನು ಅಲ್ಲಿಯೇ ಜಗತ್ತಿನ ಅಂತ್ಯದವರೆಗೂ ಪೂಜೆಗೊಳ್ಳುತ್ತಾ ಮಲಗಿರು. ನಿನ್ನ ತಲೆಯ ಭಾಗದಲ್ಲಿ ಯಾರಾದರೂ ತಮ್ಮ ಪೂರ್ವಜರಿಗೆ ತರ್ಪಣ ಬಿಟ್ಟರೆ ಅವರು ನೇರವಾಗಿ ಸ್ವರ್ಗವನ್ನು ಸೇರುತ್ತಾರೆ. ಮತ್ತು ಅವರಿಗೆ ಪ್ರತಿವರ್ಷ ಪಿಂಡಪ್ರದಾನ ಮಾಡಬೇಕಾಗಿಲ್ಲ. ಹೀಗೆ ನಿನ್ನ ಕೀರ್ತಿ ಶಾಶ್ವತವಾಗಿ ಉಳಿಯುವುದು' ಎಂದು ವರ ನೀಡಿದನಂತೆ. ಭೂಕರ್ಣ ಎಂಬ ಹೆಸರು ಬರಲು ಕರಣಾಸುರನೇ ಕಾರಣ. ಕರಣಶೀರ್ಷದಲ್ಲಿ ಶ್ರಾದ್ಧವನ್ನು ಆಚರಿಸಿ, ಕಾಗೆಗೆ ಬಲಿ ಕೊಡಬೇಕು. ಅಲ್ಲಿಗೆ ನಿಮ್ಮ ಚಿಕ್ಕಪ್ಪನಿಗೆ ಸ್ವರ್ಗ ಸಿಕ್ಕಿದಂತಾಗುತ್ತದೆ.''

ಹಾಗೆ ಕರಣಾಸುರನ ಸ್ಮಾರಕವಾದ ಪ್ರೇತಶಿಲೆಯ ಮೇಲೆ ಶ್ರಾದ್ಧ ಆಚರಿಸಿ ಕಾಗೆಗೆ ಬಲಿ ಕೊಡುವ ಸಮಯ ಬಂದಾಗ ಅಲ್ಲಿ ಒಬ್ಬ ಕಾಗೆಯೊಂದನ್ನು ಗೂಡಿನಲ್ಲಿ ಹಿಡಿದುಕೊಂಡು ರೆಡಿಯಾಗಿ ನಿಂತಿದ್ದ. ಕಾಗೆ ಹಿಡಿದಿದ್ದವನನ್ನು ಶೃಂಗರಾಜ ಆಶ್ಚರ್ಯದಿಂದ ನೋಡಿದಾಗ, ಪರಮಧಾಮಿ ಸ್ವಾಮಿಗಳು ಅದನ್ನೂ ವಿವರಿಸಿದರು:

'ನೋಡಿ, ಇಲ್ಲಿ ನಮಗೆ ಬೇಕಾದಾಗ ಕಾಗೆ ಬರುತ್ತದೋ? ಇಲ್ಲ. ಈಗ ನಮ್ಮ ದೇಶದಲ್ಲಿಯೇ ಕಾಗೆಗಳು ಮತ್ತು ಇತರ ಪಕ್ಷಿಗಳ ಸಂತತಿ ನಾಶವಾಗುತ್ತಿದೆ ಎಂದು ಹೇಳುತ್ತಾರೆ. ಅದಕ್ಕೆ ನಾವು ಮಾಡಿರುವ ವ್ಯವಸ್ಥೆ ಇದು. ಈ ಇವನ ಉದ್ಯೋಗ ಇದೇ. ಬಲಿ ಸ್ವೀಕರಿಸಲು ಕಾಗೆಯನ್ನು ಕರೆದುಕೊಂಡು ಬರುವುದು!' ಎಂದು ವಿವರಿಸಿದರು.

ಶೃಂಗರಾಜ ಅಚ್ಚರಿಯಿಂದ ಕೇಳಿದ, 'ಇವರು ಇಲ್ಲಿಯವರೆಗೆ ಇಲ್ಲೆಲ್ಲೂ ಇರಲಿಲ್ಲವಲ್ಲ, ಈಗ ಎಲ್ಲಿಂದ ಬಂದರು?'

ಪರಮಧಾಮಿ ಸ್ವಾಮಿಗಳು, 'ನಾನು ಆಗಲೇ ಮೊಬೈಲ್‌ನಲ್ಲಿ ಇಷ್ಟು ಹೊತ್ತಿಗೆ ಪ್ರೇತಶಿಲೆಗೆ ಕಾಗೆ ತಗೊಂಡು ಬಾ ಎಂದು ಇವನಿಗೆ ಹೇಳಿದ್ದೆ. ಕಾಗೆ ಬಲಿ ಸ್ವೀಕರಿಸಿದ ಮೇಲೆ ಅವನಿಗೆ ಒಂದು ಸಾವಿರ ರೂಪಾಯಿ ಕೊಡಬೇಕು ನೀವು' ಎಂದರು.

ಪ್ರೇತಶಿಲೆಯ ಮೇಲೆ ಒಂದು ಕಡೆ ಬಾಳೆಯ ಎಡೆಯಲ್ಲಿ ಇಟ್ಟ ಬಲಿಯನ್ನು ತಿನ್ನಲೆಂದು ತನ್ನ ಕಾಗೆಯನ್ನು ಅದರ ಮೇಲೆ ಎತ್ತಿ ಇಟ್ಟ, ಕಾಗೆಯ ಯಜಮಾನ. ಕಾಗೆ ವಿಧೇಯವಾಗಿ ತನಗೆ ಬೇಕಾದಷ್ಟು ಅನ್ನವನ್ನು ತಿಂದು, ಉಳಿದುದನ್ನು ಎಲೆಯಲ್ಲಿಯೇ ಬಿಟ್ಟು, ತನ್ನ ಯಜಮಾನನನ್ನು ನೋಡಿತು. ಅವನು ಅದನ್ನೆತ್ತಿ ಗೂಡಿನೊಳಗೆ ಸೇರಿಸಿದ. ಆ ಕಾಗೆ ಸ್ವಲ್ಪ ಹೊತ್ತು ಸ್ವತಂತ್ರವಾಗಿ ಬಿಟ್ಟಿದ್ದರೂ ಹಾರಿಹೋಗದೆ ಇದ್ದದ್ದು ಶೃಂಗರಾಜನಿಗೆ ಆಶ್ಚರ್ಯವಾಯಿತು.

ಪರಮಧಾಮಿ ಸ್ವಾಮಿಯವರು ಶೃಂಗರಾಜನ ಕೈಗೆ ಒಂದು ಹೂಮಾಲೆಯನ್ನು ಕಟ್ಟಿ, ಹಣೆಗೆ ತಿಲಕ ಇಟ್ಟು, ಬೆನ್ನು ತಟ್ಟಿ, 'ಸುಫಲ' ಎಂದು ಆಶ್ವಾಸನೆ ನೀಡಿ, ಮಹಾಚಲಯ್ಯನ ಆತ್ಮ ಸ್ವರ್ಗಕ್ಕೆ ಹೋಯಿತೆಂದು ಘೋಷಿಸಿದರು.

ಶ್ರಾದ್ಧ ಮುಗಿದು, ಪರಮಧಾಮಿ ಸ್ವಾಮಿಯವರಿಗೆ, ಅವರ ಸಹಾಯಕರಿಗೆ ಎಲ್ಲ ಸ್ವಾಮಿಗಳು ಹೇಳಿದಷ್ಟು ಹಣವನ್ನು ಎಣಿಸಿ ಕೊಟ್ಟಮೇಲೆ ಶೃಂಗರಾಜ ಕೇಳಿದ, 'ಈ ಕರಣಾಸುರ ಎಂದೇನೋ ಹೇಳಿದಿರಲ್ಲ? ಇದರ ಹೆಸರು ಕೇಳಿದಾಗ ನನಗೆ ಕೊರೊನಾ ಎಂದು ಹೇಳಿದ ಹಾಗೆ ಕೇಳಿಸುತ್ತದೆ. ಎಷ್ಟು ವಿಚಿತ್ರ ನೋಡಿ!'

'ವಿಚಿತ್ರವೇನೂ ಇಲ್ಲ ಇವರೆ! ನಮ್ಮ ಹಿರಿಯರಿಗೆ ಎಲ್ಲವೂ ಮೊದಲೇ ಗೊತ್ತಿರುತ್ತದೆ, ನಮಗೆ ಅದು ಬಂದ ಮೇಲೆ ಗೊತ್ತಾಗುವುದು. ನೀವು ಹೇಳಿದಂತೆ ಕೊರೊನಾವೇ ಈ ಕರಣಾಸುರ ಆಗಿದ್ದಿರಬಹುದು. ಈಗ ಅದನ್ನು ಇನ್ನೊಮ್ಮೆ ಎಲ್ಲ ಒತ್ತಿಹಿಡಿದು ಯಜ್ಞ ಮಾಡಿ ಆಹುತಿ ಕೊಡಬೇಕು. ಏನಂತೀರಿ?' ಎಂದು ಪರಮಧಾಮಿ ಸ್ವಾಮಿಯವರು ಹೇಳಿದರು.

ಶೃಂಗರಾಜ ತಲೆಯಾಡಿಸಿದ. ಕೊರೊನಾಸುರನನ್ನು ಒತ್ತಿಟ್ಟು ಯಜ್ಞ ಮಾಡುವುದು ಹೇಗೆ ಎಂದು ಗೊತ್ತಾಗಲಿಲ್ಲ. ಅಲ್ಲಿಂದ ಹಿಂದಿರುಗಿ ನಾಗರಿಕ ಲೋಕಕ್ಕೆ ಹೋಗಲು ಪಂಚೆ ಬಿಚ್ಚಿ ಪ್ಯಾಂಟು ಶರಟು ಹಾಕಿಕೊಳ್ಳಲು ಬಂಡೆಯೊಂದರ ಮರೆಗೆ ಹೋದ.

ತಾನು ಬರುವಾಗ ಚಿಕ್ಕಪ್ಪ ಮಹಾಚಲಯ್ಯನ ಆತ್ಮವನ್ನು ಹೊತ್ತು ತಂದಿದ್ದೆ, ಈಗ ಅವರನ್ನು ಸ್ವರ್ಗಕ್ಕೆ ಕಳುಹಿಸಿಕೊಟ್ಟಂತೆ ಮನಸ್ಸು ವಿಚಿತ್ರವಾದ ತಳಮಳವನ್ನು ಅನುಭವಿಸುತ್ತಿದೆ ಅಂತ ಅವನಿಗೆ ಅನಿಸಿತು. ಮಹಾಚಲಯ್ಯನ ದೇಹವನ್ನು ಭೂಮಿಗೆ ಇಳಿಸಿದುದು ಸತ್ಯವೆ, ಈಗ ಇಲ್ಲಿ ಸ್ವರ್ಗಕ್ಕೆ ಹತ್ತಿಸಿದ್ದು ಸತ್ಯವೆ ಎನ್ನುವ ಗೊಂದಲ ಕಾಡತೊಡಗಿತು. ಜತೆಗೆ, ಎಲ್ಲಿಯಾದರೂ ತನಗೇ ಈ ಮಾರಣಾಂತಿಕ ರಹಸ್ಯ ಕಾಯಿಲೆ ಅಂಟಿರಬಹುದೆ; ಮಹಾಚಲಯ್ಯನ ಅಂತ್ಯಸಂಸ್ಕಾರದ ಸಂದರ್ಭದಲ್ಲಿ; ಅಥವಾ ಈ ಸ್ವಾಮಿಗಳು, ಅವರ ಸಹಾಯಕ, ಕಾಗೆಯವ ಮುಂತಾಗಿ ಯಾರಿಂದಲಾದರೂ ತನಗೆ ರೋಗಾಣು ಅಂಟಿರಬಹುದೆ ಎಂಬ ಭಯವೂ ಉಂಟಾಯಿತು.

ಅತ್ತ ಶಾಂತಮ್ಮನೂ ಗಂಡನ ಬಗ್ಗೆಯೇ ಯೋಚಿಸುತ್ತ ಕುಳಿತಿದ್ದವಳು, ಜಾತ್ರೆಯಲ್ಲಿ ತಿರುಗಾಡಿ ಬರುವೆನೆಂದು ಸಂಭ್ರಮದಲ್ಲಿ, ಜೀವನೋತ್ಸಾಹದಿಂದ ಹೊರಗೆ ಹೋದ ಮಹಾಚಲಯ್ಯನನ್ನು ತಾನು ಆಮೇಲೆ ನೋಡಲೇ ಇಲ್ಲವಲ್ಲ ಎಂದು ಕಣ್ಣೀರು ಹರಿಸುತ್ತಿದ್ದಳು.

ಪ್ರತಿಕ್ರಿಯಿಸಿ: feedback@sudha.co.in